(iii) ಚೆನ್ನಗಿರಿ ತಾಲ್ಲೂಕಿನಲ್ಲಿ ಜೀತಪದ್ಧತಿಯಿಂದ ಬಿಡುಗಡೆ ಹೊಂದಿದವರಿಗೆ ಪುನರ್ವಸತಿ ಕಲ್ಪಿಸಿರುವುದು

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಜಿಲ್ಲೆಯ ಚೆನ್ನಗಿರಿ ತಾಲ್ಲೂಕಿನಲ್ಲಿ ೧೯೭೫-೭೬ರಲ್ಲಿ ಜೀತ ಪದ್ಧತಿಯಿಂದ ಬಿಡುಗಡೆ ಹೊಂದಿದ ಸುಮಾರು ೩೦೦೦ ಜನಗಳ ಪೈಕಿ ಕೇವಲ ೯೧೨ ಜನರಿಗೆ ಪುನರ್ ವಸತಿ ಕಲ್ಪಿಸಿದೆ. ಕೇಂದ್ರ ಸರ್ಕಾರದ ಪಾಲಿನ ಹಣ ಬಿಡುಗಡೆ ಆಗಿ ೭-೮ ವರ್ಷಗಳು ಕಳೆದಿದ್ದು, ೩ ತಿಂಗಳ ಒಳಗಾಗಿ ಈ ಹಣ ವಿತರಣೆ ಆಗಬೇಕೆಂದು ಆದೇಶವಿದ್ದರೂ ದಿನಾಂಕ ೧೮-೧೨-೧೯೮೩ರಲ್ಲಿ ಸುಪ್ರೀಂ ಕೋರ್ಟ್ ಸಹಾ ಎಲ್ಲಾ ರಾಜ್ಯದ ಜೀತಪದ್ಧತಿಯ ವಿಮುಕ್ತ ಜನಗಳಿಗೆ ೩ ತಿಂಗಳೊಳಗಾಗಿ ಎಲ್ಲಾ ಸೌಲಭ್ಯ ಕೊಡಬೇಕೆಂದು ಆದೇಶ ನೀಡಿದೆ.

ಹೀಗಿದ್ದರೂ ಚನ್ನಗಿರಿ ತಾಲ್ಲೂಕಿನಲ್ಲಿ ಈ ಪುನರ್ ವಸತಿ ಸಮಯದಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಸಿ.ಓ.ಡಿ. ತನಿಖೆಗೆ ಒಳಪಡಿಸಿ ವರ್ಷಗಳು ಉರುಳಿದರೂ ಉಳಿದ ೨೧೯೮ ಜನಗಳಿಗೆ ಪುನರ್ ವಸತಿ ಮಾಡಿಲ್ಲ. ಇದರ ಬಗ್ಗೆ ತನಿಖೆ ನಡೆಯುತ್ತಿರುವುದು ಈಗಾಗಲೇ ವಿತರಣೆ ಆಗಿರುವ ೯೧೨ ಜನದ ಬಗ್ಗೆ ಇದ್ದು ಉಳಿದ ೨೧೯೮ ಜನಕ್ಕೆ ತಕ್ಷಣ ಪುನರ್ ವಸತಿ ಕಲ್ಪಿಸಲು ಸರ್ಕಾರ ತುರ್ತು ಕ್ರಮ ಏನು ಕೈಗೊಂಡಿದೆ ಎಂಬ ಬಗ್ಗೆ ಸರ್ಕಾರದ ಹೇಳಿಕೆ ತಿಳಿಯಬಯಸುತ್ತೇನೆ.

ಶ್ರೀ ಬಿ. ಆರ್. ಯಾವಗಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ರಾಜ್ಯದಲ್ಲಿ ಸುಮಾರು ಎರಡು ಸಾವಿರ ಮೇಲೆ ಜೀತ ವಿಮುಕ್ತರು ಇದ್ದಾರೆ ಎಂದು ಹೇಳಿದ್ದಾರೆ. ಎರಡು ಸಾವಿರದಲ್ಲಿ ಅವರನ್ನು ವಿಮುಕ್ತರನ್ನಾಗಿ ಮಾಡಿದ ಸಂಖ್ಯೆ ೧೨೫೭ ಎಂದು ಕೊಟ್ಟಿದ್ದಾರೆ. ಅವರು ಹೇಳಿದ ಹಾಗೆ ಈ ಕೆಲಸ ಸ್ವಲ್ಪ ನಿಧಾನವಾದದ್ದು ನಿಜ. ಕಾರಣ ಅಲ್ಲಿ ನಡೆದಂಥ ಅವ್ಯವಹಾರಗಳನ್ನು ಮತ್ತು ಅಕ್ರಮಗಳನ್ನು ಸಿ.ಓ.ಡಿ ತನಿಖೆಗೆ ಒಳಪಡಿಸಿದ್ದರಿಂದ ವರದಿ ಬರುವವರೆಗೂ ಕಾಯಲಾಗಿದೆ. ಇದರ ಬಗ್ಗೆ ಪ್ರಾಥಮಿಕ ವರದಿಯನ್ನು ಕೊಟ್ಟಿದ್ದಾರೆ. ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ನ ತೀರ್ಮಾನಗಳು ಏನು ಇವೆ, ಇದರ ಆಡಿಯಲ್ಲಿ ಯಾರು ಯೋಗ್ಯರು, ಯಾರು ಅರ್ಹರು ಎಂದು ಪರಿಶೀಲಿಸಿ ಸರ್ವರಿಗೂ ಕೊಡಲಿಕ್ಕೆ ತೀರ್ಮಾನ ಕೈಗೊಂಡಿದೆ. ಇದಕ್ಕಾಗಿ ಹಣವನ್ನು ಸಹಾ ಬಿಡುಗಡೆ ಮಾಡಿದೆ ಎಂದು ತಿಳಿಸಬಯಸುತ್ತೇನೆ.

ಉಪಸಭಾಧ್ಯಕ್ಷರು.—ಶ್ರೀ ಕೆ. ವಸಂತ ವಿ. ಸಾಲಿಯಾನ : ಗೈರುಹಾಜರಿ.

iv) ಮಂಲ್ಪೆ ಸಮುದ್ರ ತೀರವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವುದು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಮಲ್ಪೆ ಸಮುದ್ರ ತೀರವು ನಮ್ಮ ರಾಜ್ಯದ ಅತ್ಯಂತ ಸುಂದರ ತಾಣಗಳಲ್ಲಿ ಒಂದಾಗಿದ್ದು, ಅಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದವರು ಒಂದು ಸಮುದ್ರ ತೀರ ಪ್ರವಾಸೋದ್ಯಮ ಯೋಜನೆಯ ನಿರ್ಮಾಣವನ್ನು ಕೈಗೆತ್ತಿಕೊಂಡು ಅದು ಈಗೆ ಪೂರ್ಣಗೊಳ್ಳುವ ಹಂತದಲ್ಲಿದೆ. ಈ ಸಂಬಂಧದಲ್ಲಿ ಸದರಿ ನಿಗಮದ ಜನರಲ್ ಮ್ಯಾನೇಜರ್ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲ್ಲಿ ಒಂದು ಜಾಹೀರಾತನ್ನು ನೀಡಿದ್ದಾರೆ. ಆ ಜಾಹೀರಾತು ಆಂಗ್ಲ ಭಾಷೆಯಲ್ಲಿ ಈ ಕೆಳಕಂಡಂತಿದೆ.